ಏಕಾಂತತೆಯೂ ಬಿಸಿಗಾಳಿಯೂ ಆತನನ್ನು ಬೇಟೆಯಾಡಿತು.

## ಎರಡು

ಕಳೆದು ಹೋದ ವರ್ಷಗಳಲ್ಲಿ ಆತ ಒಮ್ಮೆಯೂ ಯಾವ ಗಾಡಿಯ ಬರವನ್ನೂ ಗಮನಿಸದೇ ಇದ್ದಿರಲಿಲ್ಲ. ಯಾವ ಗಾಡಿಗೂ ಆತ ಬಾವುಟ ಬೀಸದೇ ಇದ್ದಿರಲಿಲ್ಲ. ಆತನಿಗೆ ವಯಸ್ಸಾಗುತ್ತಿತ್ತು. ಮೇಲಧಿಕಾರಿಗಳಿಗೆ ಪತ್ರಗಳನ್ನು ಬರೆಯುತ್ತಲೇ ಇದ್ದ. ತಾನು ಕೆಲಸಕ್ಕೆ ಸೇರಿದ ದಿನ, ಬರೆದ ಪರೀಕ್ಷೆಗಳು, ಪಡೆದ ತರಬೇತಿಗಳೆಲ್ಲವನ್ನು ಆತ ತನ್ನ ನೆನಪಿನಂಗಳದ ಸ್ಮಶಾನದಲ್ಲಿ ದಫನ್ ಮಾಡಿದ್ದ. ಹಾಗಿರುವಾಗ ಶಿಶಿರಕಾಲ ಕಳೆದುಹೋದ ಒಂದು ದಿನ ಮಾಸ್ಟರ್ ಯೋಚಿಸಿದ, ತನ್ನಂತೆಯೇ ಒಬ್ಬರು ಈ ಹಳಿಗಳ ಎರಡು ತುದಿಗಳಲ್ಲಿ ಇರಬಹುದಲ್ಲ. ಇದ್ದೇ ಇರುತ್ತಾರೆ. ಹಳಿಗಳ ಮೇಲೆ ಸೀದಾ ನಡೆದರೆ ಅವರಲ್ಲಿ ಒಬ್ಬರನ್ನು ಖಂಡಿತಾ ಭೇಟಿಯಾಗಬಹುದು. ಆದರೆ, ಸ್ಟೇಷನ್ ಬಿಟ್ಟು ಬಿಡುವಂತೆಯೂ ಇಲ್ಲ. ಆ ನಡುವೆ ಯಾವುದಾದರೂ ಗಾಡಿ ಬಂದು ಬಿಟ್ಟರೆ? ಬೇಜಾವಾಬ್ದಾರಿಯ ಮೇಲಧಿಕಾರಿ ನಡೆದಾಡುವ ಹೆಣ ಮಾತ್ರ. ಲಕ್ಷಣವಂತ ಕ್ರಿಮಿನಲ್‌ಕೂಡ ಹೌದು. ತಕ್ಷಣ ಆತನಿಗೊಂದು ಯೋಜನೆ ಹೊಳೆಯಿತು.

ವರ್ಷಗಳ ಮರೆವಿನಲ್ಲಿ ನೂರಾರು ರೈಲುಗಾಡಿಗಳು ಇಲ್ಲಿಂದ ಹಾದುಹೋಗಿವೆ. ಒಮ್ಮೆಯೂ ಯಾವ ಗಾಡಿಯಲ್ಲೂ ಅದರ ಚಾಲಕನನ್ನು ತಾನು ಕಂಡಿಲ್ಲ. ಯಾರು ಕೂಡ ತನಗೆ ಪ್ರತಿವಂದಿಸಿರಲಿಲ್ಲ. ಹಗಲು ರಾತ್ರಿಗಳಲ್ಲಿ ಅವು ಯಾವುದೋ ಪ್ರೇತ ವಾಹನದಂತೆ ಹಾದು ಹೋಗುತ್ತಿದ್ದವು. ತನ್ನ ಅಸ್ತಿತ್ವಕ್ಕೆ ಯಾವ ಬೆಲೆಯನ್ನೂ ಅವರು ನೀಡಿರಲಿಲ್ಲ.

ಕೊನೆಗೆ ಆತ ತನ್ನ ಯೋಜನೆಯನ್ನು ಜಾರಿಗೊಳಿಸಿಯೇ ಬಿಟ್ಟ. ಆತ ತನ್ನ ಯೂನಿಫಾರ್ಮಿನಲ್ಲಿ ಒಣಹುಲ್ಲನ್ನು ತುರುಕಿ ಬೊಂಬೆ ತಯಾರಿಸಿದ. ಹಸಿರು ಬಾವುಟವೊಂದನ್ನು ಅದಕ್ಕೆಸಿಕ್ಕಿಸಿ ಹಳಿಯ ಕಡೆಗೆ ಚೂರು ಬಾಗಿರುವಂತೆ ಅದನ್ನು ನಿಲ್ಲಿಸಿದ. ಶಾಪಾಟ್ಟಯಿಂದ ಇದೆಲ್ಲವನ್ನು ಆತ ಗುಟ್ಟಾಗಿಯೇ ಇರಿಸಿದ್ದ. ಯಾವುದೋ ಭೂಗತ ಸರ್ವಾಧಿಕಾರಿಯ ಗೂಢಚಾರ ಆತ.

ಎಲ್ಲವೂ ಸರಿಯಾಗಿದೆಯೆಂದು ಖಾತರಿಯಾದಾಗ ಮಾಸ್ಟರ್ ಸ್ಟೇಷನ್ ಬಿಟ್ಟು ನಡೆಯತೊಡಗಿದ. ಪ್ರತಿ ಹೆಜ್ಜೆಯೂ ಅತಿ ಭಾರವಾಗಿ ಭೂಮಿಗೆ ಅಪ್ಪಳಿಸುತ್ತಿತ್ತು. ಪಿಶಾಚಿಗಳು ವಿಶ್ರಮಿಸುವ ಟೆಲಿಫೋನ್ ಕಂಬಗಳಿಗೆ ಬಿಗಿಯಾಗಿ ಕಟ್ಟಿದ್ದ ತಂತಿಗಳಿಗೆ ಗಾಳಿ ಸೋಕಿತು. ಅದರ ಕೀರಲು ಸದ್ದು ಕೇಳಿ ಅದೇ ಮೊದಲ ಬಾರಿ ಆತ ಹೆದರಲಿಲ್ಲ. ಸ್ಟೇಷನ್ ಬಿಟ್ಟು ದೂರಾದಂತೆ ತಾನು ಭೂಮಿಗೆ ಹೊಸದಾಗಿ ಹುಟ್ಟಿ ಬರುತ್ತಿರುವಂತೆ ಅನಿಸಿತು. ಒಂಟಿಮರದ ಹಕ್ಕಿಗಳು ಆ ದಿನ ಭಯಗೊಂಡು ಹಾರಿ ಹೋಗಲಿಲ್ಲ. ನಡೆದಂತೆ ಹಳಿಗಳಿಗೆ ಸಮಾನಾಂತರವಾಗಿ ಕಟ್ಟಿದ್ದ ತಂತಿಗಳು ಕಾಣದಾದವು. ಹಕ್ಕಿಗಳಿಗೆ ಕೂರಲು ಜಾಗವಿಲ್ಲದಾಗಿತ್ತು. ದೇಶಾಂತರಿ ಹಕ್ಕಿಗಳು ಹೊತ್ತು ತರುವ ಹೊಸ ಹಾಡಿನ ಕುರಿತು, ಹೊಸ ಲೋಕದೃಷ್ಟಿಯ ಕುರಿತು ಕೂತು ಮಾತನಾಡಲು ಅವುಗಳಿಗೆ ಜಾಗ ಇಲ್ಲವಾಗಿದೆ. ಹಕ್ಕಿಗಳು ತೀರಾ ಅಪರಿಚಿತನೂ ಒಳ್ಳೆಯವನೂ ಆದ ಮನುಷ್ಯನೆಂಬಂತೆ ಆತನನ್ನು ನೋಡಿದವು. ತನ್ನ ಸ್ಟೇಷನ್ ದೂರದಲ್ಲೆಲ್ಲೋ ಒಂದು ಬಿಂದು ಮಾತ್ರವಾಗಿ ಉಳಿದಿರುವುದನ್ನು ಮಾಸ್ಟರ್ ಗುರುತಿಸಿದ. ಎರಡು ಬದಿಯ ಬಯಲಿಗೆ ನೆನೆದ ಬಣ್ಣವಿದೆಯೆಂದು ಗಮನಿಸಿದ. ಸ್ಟೇಷನ್ನನ್ನು ಸುತ್ತುವರಿದಿದ್ದ ಪುರಾತನಗಂಧ ತನ್ನಿಂದ ದೂರಾಗುತ್ತಿರುವುದನ್ನು ಗಮನಿಸಿದ. ದೂರದಲ್ಲೆಲ್ಲೋ ಹಕ್ಕಿಯೊಂದು ಹಾಡಲು ಪ್ರಯತ್ನಿಸುತ್ತಿದೆಯೇ? ಸುಗಂಧಭರಿತ ತಂಗಾಳಿ ತನ್ನನ್ನು ಸೋಕಿತೇ? ಹಳಿಗಳ ಮೇಲೆ ಮುಂದಕ್ಕೆ ಸಾಗಿದಂತೆಲ್ಲ ಯಾತ್ರೆಗೆ ತನ್ನದೇ ಆದ ತಾಳವೊಂದು ಸಿಗುತ್ತಿದೆಯೆಂದು ಮಾಸ್ಟರ್ ಅರಿತ. ಈ ನಿರ್ಜನತೆಯಲ್ಲಿ ದೂರಗಳು ಮರೆಯಾದವು. ನಿಗೂಢತೆ ಕಣ್ಣಿಂದ ಮರೆಯಾಗುತ್ತಿದೆ. ಇಗೋ ಇಲ್ಲಿ, ಹಳಿಗಳು ತಿರುಗುತ್ತಿವೆ. ಮಾಸ್ಟರ್ ಬೆಚ್ಚಿದ.

ಹಳಿಗಳು ದಾರಿ ತಿರುಗಿ ಮುಂದಕ್ಕೆ ಹೋಗುತ್ತಿರುವುದು ಒಂಟಿಯಾಗಿ! ಒಂಟಿ ಹಳಿಗಳು ಮತ್ತೆದೂರಕ್ಕೆ ಹರಿದು ಹೋಗಿವೆ. ಇಷ್ಟು ಕಾಲವೂ ರೈಲುಗಾಡಿಗಳೆಲ್ಲ ಹಾದು ಹೋದದ್ದು ಒಂಟಿ ಹಳಿಯೆಂಬ ಅಜ್ಞಾನದ ಮೇಲೆಯೇನು? ಭಗವಂತಾ... ನನ್ನ ಗಾಡಿಗಳೂ... ಒಂದಾಯುಸ್ಸಿನ ಸಾಕ್ಷಿಯೂ, ನನ್ನ ಕನಸುಗಳೂ, ಬದುಕಿನ ವಿಹ್ವಲತೆಗಳೂ ಯಾಕಾಗಿದ್ದವು?

ಮಾಸ್ಟರ್ ತನ್ನ ಕಣ್ಣೀರನ್ನು ತಡೆದು ನಿಲ್ಲಿಸಲು ಸೋತು ಹೋದ. ●